

# ಚಿನ್ನ ಬೆಳ್ಳಿ ಗಗನಕ್ಕೆ, ರೂಪಾಯಿ ಮೌಲ್ಯ ಪಾತಾಳಕ್ಕೆ

ದೇಶದ ಅರ್ಥವ್ಯವಸ್ಥೆ ವೇಗವಾಗಿ ಬೆಳವಣಿಗೆ ಹೊಂದುತ್ತಿದ್ದರೂ, ಈ ವರ್ಷ ಚಿನ್ನ ಮತ್ತು ಬೆಳ್ಳಿಯ ಧಾರಣೆ ದಾಖಲೆ ಮಟ್ಟಕ್ಕೆ ಏರಿ ಜನಸಾಮಾನ್ಯರ ಕೈಗೆ ಸುಲಭವಾಗಿ ದೊರಕದಂತಾಯಿತು (ಚಿನ್ನ 10 ಗ್ರಾಂ ₹1.37 ಲಕ್ಷ ಮತ್ತು ಬೆಳ್ಳಿ ಕೆಜಿಗೆ ₹2 ಲಕ್ಷ ದಾಟಿತು). ಇದೇ ಹೊತ್ತಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 90ರ ಗಡಿ ದಾಟಿ ಇತಿಹಾಸದಲ್ಲೇ ದಾಖಲೆಯ ಕುಸಿತ ಕಂಡಿತು.






# ಸದ್ದು ಮಾಡಿದ 'ಮತಕಳವು'

ಕಾಂಗ್ರೆಸ್ ನಾಯಕ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧ ಮತಕಳವು ನಡೆಸಿರುವ ಗಂಭೀರ ಆರೋಪ ಮಾಡಿದ್ದು ದೇಶದ ರಾಜಕೀಯದಲ್ಲಿ ಸದ್ದು ಮಾಡಿತು.

2023ರಲ್ಲಿ ಕರ್ನಾಟಕದಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಮಹಾದೇವಪುರದಲ್ಲಿ ಮತಕಳವು ನಡೆದಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಆಳಂದ ಕ್ಷೇತ್ರದಲ್ಲೂ ನಡೆದಿದೆ ಎಂದರು. ಮಹಾರಾಷ್ಟ್ರ, ಬಿಹಾರ ಚುನಾವಣೆಯಲ್ಲೂ 'ಮತಚೋರಿ' ನಡೆದಿದೆ ಎಂದೂ ಅವರು ದೂರಿದರು. ಕಾಂಗ್ರೆಸ್ ಪಕ್ಷವು ಇದರ ವಿರುದ್ಧ ದೊಡ್ಡ ಅಭಿಯಾನವನ್ನೇ ಆರಂಭಿಸಿದೆ.

# ವಿವಾದ ಹುಟ್ಟುಹಾಕಿದ ಎಸ್‌ಐಆರ್

ಬಿಹಾರ ವಿಧಾನಸಭಾ ಚುನಾವಣೆಗೂ ಮುನ್ನ ಭಾರತೀಯ ಚುನಾವಣಾ ಆಯೋಗವು ಕೈಗೊಂಡ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ವಿವಾದಕ್ಕೆ ಕಾರಣವಾಯಿತು. ಈ ಪ್ರಕ್ರಿಯೆಯನ್ನು ತರಾತುರಿಯಲ್ಲಿ ಕೈಗೊಳ್ಳುತ್ತಿರುವುದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದವು. ತನ್ನ ಕ್ರಮವನ್ನು ಸಮರ್ಥಿಸಿಕೊಂಡ ಚುನಾವಣಾ ಆಯೋಗವು ಕರ್ನಾಟಕ ಸೇರಿದಂತೆ ದೇಶದಾದ್ಯಂತ ಎಸ್‌ಐಆರ್ ನಡೆಸುವ ಘೋಷಣೆ ಮಾಡಿತು. ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ 9 ರಾಜ್ಯಗಳಲ್ಲಿ ಇದು ನಡೆಯುತ್ತಿದೆ. ಬಿಜೆಪಿ ಆಡಳಿತವಿಲ್ಲದ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ಇದನ್ನು ತೀವ್ರವಾಗಿ ವಿರೋಧಿಸಿವೆ.






# ವಿದೇಶ ವಿದ್ಯಮಾನ

- ಡೊನಾಲ್ಡ್ ಟ್ರಂಪ್ ಅವರು ಈ ವರ್ಷದ ಜನವರಿಯಲ್ಲಿ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಜಾಗತಿಕ ಮಟ್ಟದಲ್ಲಿ ಭೌಗೋಳಿಕ ರಾಜಕೀಯದ ಚಿತ್ರಣ ಬದಲಾಗಿದೆ. ಅಮೆರಿಕವೇ ಮೊದಲು ಎಂಬ ನಿಲುವು ಹೊಂದಿರುವ ಟ್ರಂಪ್ ಆಡಳಿತದ ಸುಂಕ ಹೇರಿಕೆ, ವಲಸೆ ನೀತಿ, ಅನುದಾನ ಕಡಿತದ ನಿಲುವುಗಳು ಅದರ ಮಿತ್ರ ರಾಷ್ಟ್ರಗಳು ಸೇರಿದಂತೆ ಹಲವು ದೇಶಗಳ ಅಸಮಾಧಾನಕ್ಕೆ ಕಾರಣವಾಗಿವೆ. ಅಮೆರಿಕದ ವಿರುದ್ಧ ಅಸಮಾಧಾನಗೊಂಡಿರುವ ಬ್ರಿಕ್ಸ್ ರಾಷ್ಟ್ರಗಳ ಕೂಟ ಇನ್ನಷ್ಟು ಪ್ರಬಲವಾಗುವ ಸಂಕಲ್ಪ ಮಾಡಿದೆ.
- ರಷ್ಯಾ–ಉಕ್ರೇನ್ ಯುದ್ಧ ಈ ವರ್ಷವೂ ಮುಂದುವರಿಯಿತು. ಯುದ್ಧ ನಿಲ್ಲಿಸುವ ಪ್ರಯತ್ನವಾಗಿ ಟ್ರಂಪ್ ಅವರು ಅಲಾಸ್ಕಾದಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಿದರೂ ಫಲಪ್ರದವಾಗಲಿಲ್ಲ.



- ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್–ಹಮಾಸ್ ಸಂಘರ್ಷ ತೀವ್ರಗೊಂಡು ವರ್ಷದ ಕೊನೆಯ ಹೊತ್ತಿಗೆ ತಾತ್ಕಾಲಿಕವಾಗಿ ನಿಂತಂತೆ ಕಾಣುತ್ತಿದೆ. ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧಕ್ಕೂ (ಜೂನ್ 13–ಜೂನ್ 24) ಈ ವರ್ಷ ಸಾಕ್ಷಿಯಾಯಿತು. ಇರಾನ್ ರಹಸ್ಯವಾಗಿ ಪರಮಾಣು ಅಭಿವೃದ್ಧಿ ನಡೆಸುತ್ತಿದೆ ಎನ್ನಲಾದ ಸ್ಥಳಗಳ ಮೇಲೆ ಅಮೆರಿಕವೇ ಬಾಂಬ್ ಎಸೆಯಿತು.
- ಥಾಯ್ಲೆಂಡ್–ಕಾಂಬೋಡಿಯಾ ನಡುವಿನ ಗಡಿ ಸಂಘರ್ಷ ತೀವ್ರಗೊಂಡಿತು. ಜುಲೈನಲ್ಲಿ ಐದು ದಿನ ಯುದ್ಧ ನಡೆದಿತ್ತು. ಟ್ರಂಪ್ ಮಧ್ಯಸ್ಥಿಕೆಯಲ್ಲಿ ಅಕ್ಟೋಬರ್ ಕೊನೆಯ ವಾರದಲ್ಲಿ ನಡೆದ ಶಾಂತಿ ಒಪ್ಪಂದ ಮುರಿದು ಬಿದ್ದು, ಡಿ.8ರಿಂದ ಮತ್ತೆ ಗಡಿ ವಿಚಾರವಾಗಿ ಎರಡು ರಾಷ್ಟ್ರಗಳು ಕಾದಾಡುತ್ತಿವೆ.